ಭಾರತೀಯ ಸಾಮಾನ್ಯ ವಿಮಾ ನಿಗಮವು ಈ ಬೆಳೆ ನಷ್ಟ ಪರಿಹಾರದ ಹಣವನ್ನು ಇತ್ಯರ್ಥಪಡಿಸುತ್ತದೆ. ಕಬ್ಬು ಮತ್ತು ಹತ್ತಿ ಬೆಳೆಗಳು ದೀರ್ಘಾವಧಿ ಬೆಳೆಗಳಾಗಿದ್ದು ಬೆಳೆ ಕಟಾವು ಆಧಾರದ ಮೇಲೆ ಇಳುವರಿ ಮಾಹಿತಿಯನ್ನು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ಕ್ರೋಢೀಕರಿಸುತ್ತಿದ್ದು, ಅಂತಿಮ ಇಳುವರಿ ಮಾಹಿತಿಯನ್ನು ಭಾರತೀಯ ಸಾಮಾನ್ಯ ವಿಮಾ ನಿಗಮಕ್ಕೆ ಕಳುಹಿಸಿದ ನಂತರ ಬೆಳೆ ನಷ್ಟ ಪರಿಹಾರ ಇತ್ಯರ್ಥಪಡಿಸಲಾಗುವುದು.

ಆ) ಮೇಲೆ ತಿಳಿಸಿರುವ 9 ಬೆಳೆಗಳಿಗೆ ಇತ್ಯರ್ಥಪಡಿಸಿರುವ ಬೆಳೆ ವಿಮಾ ನಷ್ಟ ಪರಿಹಾರದ ಮೊತ್ತವನ್ನು ರೈತರ ಬ್ಯಾಂಕ್ ಜೊತೆಗೆ ಜಮಾ ಮಾಡಲು ಭಾರತೀಯ ಸಾಮಾನ್ಯ ವಿಮಾ ನಿಗಮವು ಈಗಾಗಲೇ ಕ್ರಮ ಕೈಗೊಂಡಿದೆ.

ಇ) ಒಂದು ಅಧಿಸೂಚಿಸಿದ ಪ್ರದೇಶದಲ್ಲಿ (ಹೋಬಳಿ ಅಥವಾ ತಾಲ್ಲೂಕು) ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ವಾಸ್ತವಿಕ ಇಳುವರಿಯು ಪ್ರಾರಂಭಿಕ ಇಳುವರಿಗಿಂತ ಕಡಿಮೆ ಇದ್ದಲ್ಲಿ ಆ ವ್ಯತ್ಯಾಸದ ಇಳುವರಿಗೆ ಅನುಗುಣವಾಗಿ ಹಾಗೂ ವಿಮಾ ಮೊತ್ತಕ್ಕೆ ಅನುಸಾರವಾಗಿ ಆ ಅಧಿಸೂಚನೆಯ ಪ್ರದೇಶದಲ್ಲಿ ಹೋಬಳಿ ಅಥವಾ ತಾಲ್ಲೂಕು ಬೆಳೆ ವಿಮೆ ಮಾಡಿಸಿದ ಎಲ್ಲಾ ರೈತರಿಗೂ ಬೆಳೆ ವಿಮೆ ನಷ್ಟ ಪರಿಹಾರ ದೊರೆಯುತ್ತದೆ.

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆನಿಲ್ಲಾ ಬೆಳೆ

4660 (5430) : ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆನಿಲ್ಲಾ ಬೆಳೆಯನ್ನು ಎಷ್ಟು ಎಕರೆಯಲ್ಲಿ ಬೆಳೆಯಲಾಗುತ್ತಿದೆ. (ತಾಲ್ಲೂಕುವಾರು ವಿವರ ನೀಡುವುದು);

ಆ) ತೆನಿಲ್ಲಾ ಬೆಳೆಯುವ ಬಗ್ಗೆ ಸಹಕಾರ ಮತ್ತು ತಾಂತ್ರಿಕ ಸಲಹೆ ಕೊಡುವ ಕಾರ್ಯಕ್ರಮವಿದೆಯೆ;

ಇ) ಇದ್ದರೆ ಏನೆಲ್ಲಾ ಮಾಹಿತಿ ಕೊಡಲಾಗುವುದು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆನಿಲ್ಲಾ ಬೆಳೆಯನ್ನು 433 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಸಲಾಗುತ್ತಿದೆ. ತಾಲ್ಲೂಕುವಾರು ವಿವರವನ್ನು ಈ ಕೆಳಗೆ ನೀಡಿದೆ.

ಜಿಲ್ಲೆ		ತಾಲ್ಲೂಕು	ವಿಸ್ತೀರ್ಣ (ಹೆಕ್ಟೇರು)
ಉಡುಪಿ	1.	ಉಡುಪಿ	161
	2.	ಕಾರ್ಕಳ	19
	3.	ಕುಂದಾಪುರ	17
		ಒಟ್ಟು	197
ದಕ್ಷಿಣ ಕನ್ನಡ	1.	ಮಂಗಳೂರು	23
	2.	ಬಂಟ್ವಾಳ	35
	3.	ಪುತ್ತೂರು	116
	4.	ಸುಳ್ಯ	17
	5.	ಬೆಳ್ತಂಗಡಿ	45
		ಒಟ್ಟು	236
		ಒಟ್ಟಾರೆ	433

ಆ) ಇದೆ.

ಇ)1. ವೆನಿಲ್ಲಾ ಬೆಳೆಯ ಬೇಸಾಯ ಕ್ರಮಗಳ ಪರಿಚಯ ಮಾಡಿಕೊಡಲು ಪ್ರಾತ್ಯಕ್ಷತೆಗಳನ್ನು ಏರ್ಪಡಿಸಿ ವೆನಿಲ್ಲಾ ಗಿಡಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

2. ವೆನಿಲ್ಲಾ ಸಂಸ್ಕರಣ ಘಟಕಗಳ ಸ್ಥಾಪನೆಗಾಗಿ ಸಹಾಯ ಧನವನ್ನು ನೀಡಲಾಗುವುದು. ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಗೆ ತಲಾ ಒಂದು ಘಟಕದ ಸ್ಥಾಪನೆಗೆ ಸಹಾಯಧನ ನೀಡುವ ಕಾರ್ಯಕ್ರಮವಿರುತ್ತದೆ.

3. ವೆನಿಲ್ಲಾ ಕೃಷಿಯ ಬಗ್ಗೆ ತಾಂತ್ರಿಕ ಮಾಹಿತಿಯನ್ನು ತರಬೇತಿ ವಿಚಾರ ಸಂಕಿರಣ, ಪ್ರಕಟಣೆ ಮೂಲಕ ರೈತರಿಗೆ ಒದಗಿಸಲಾಗುತ್ತಿದೆ.

4. ವೆನಿಲ್ಲಾದ ರಪ್ತಿಗೆ ಉತ್ತೇಜನ ನೀಡಲು ವೆನಿಲ್ಲಾ ಕೃಷಿ ರಫ್ತುವಲಯವನ್ನು ಸ್ಥಾಪಿಸಲು ಭಾರತ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು ವೆನಿಲ್ಲಾ ಕೃಷಿ ರಫ್ತುವಲಯದ ವ್ಯಾಪ್ತಿಗೆ ಒಳಪಡುತ್ತವೆ.

ಮೈಸೂರು ಜಿಲ್ಲೆಯಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು

4661 (5402) : ಶ್ರೀ ಗುರುಸ್ವಾಮಿ ಎ. ಎಸ್. (ಚಾಮುಂಡೇಶ್ವರಿ) ಮಾನ್ಯ ಮಹಿಳಾ ಮತ್ತು ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿರುವ ಸ್ತ್ರೀಶಕ್ತಿ ಸಹಾಯ ಸಂಘಗಳು ಎಷ್ಟು? (ಮೈಸೂರು ತಾಲ್ಲೂಕಿನ ಸ್ತ್ರೀಶಕ್ತಿ ಸಹಾಯ ಸಂಘಗಳ ವಿವರ ನೀಡುವುದು)

ಆ) ಮೈಸೂರು ತಾಲ್ಲೂಕಿನ ಎಲ್ಲ ಸ್ತ್ರೀಶಕ್ತಿ ಸಹಾಯ ಸಂಘಗಳಿಗೆ ಸಹಾಯಧನ ನೀಡಲಾಗಿದೆಯೇ? ಇಲ್ಲವಾದರೆ ಯಾವಾಗ ನೀಡಲಾಗುವುದು

ಇ) ಹೊಸದಾಗಿ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸ್ಥಾಪನೆ ಮತ್ತು ನೊಂದಣಿಗೆ ನಿರ್ಬಂಧ ವಿಧಿಸಲಾಗಿದೆಯೇ? ಇಲ್ಲವಾದರೆ ನೊಂದಣಿಗೆ ಇರುವ ತೊಡಕು ಏನು?

ಈ) ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು ಮತ್ತು ಯೋಜನೆಯನ್ನು ಜನಪ್ರಿಯಗೊಳಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಮೈಸೂರು ಜಿಲ್ಲೆಯಲ್ಲಿ ಒಟ್ಟು 3701 ಸ್ತ್ರೀಶಕ್ತಿ ಗುಂಪುಗಳಿವೆ.

ಮೈಸೂರು ತಾಲ್ಲೂಕಿನಲ್ಲಿ ಒಟ್ಟು 449 ಸ್ತ್ರೀಶಕ್ತಿಗುಂಪುಗಳು ರಚನೆಯಾಗಿದ್ದು. 7479 ಮಹಿಳೆಯರು ಸದಸ್ಯರಾಗಿರುತ್ತರೆ. ಈ ಗುಂಪುಗಳು ಒಟ್ಟು ರೂ. 69.99 ಲಕ್ಷಗಳನ್ನು ಉಳಿತಾಯ ಮಾಡಿದ್ದು. ಒಟ್ಟು 2114 ಸದಸ್ಯರುಗಳು ವಿವಿಧ ಬ್ಯಾಂಕುಗಳಿಂದ ಆದಾಯೋತ್ಪನ್ನ ಚಟುವಟಿಕೆಯನ್ನು ಹಮ್ಮಿಕೊಳ್ಳಲು ರೂ. 128.77 ಲಕ್ಷಗಳ ಸಾಲವನ್ನು ಪಡೆದಿರುತ್ತಾರೆ. ಸರ್ಕಾರದಿಂದ 165 ಗುಂಪುಗಳಿಗೆ ರೂ. 5.75 ಲಕ್ಷಗಳನ್ನು ಸುತ್ತುನಿಧಿಯಾಗಿ ಬಿಡುತಡೆ ಮಾಡಿದೆ.

ಆ) ಮೈಸೂರು ತಾಲ್ಲೂಕಿನಲ್ಲಿ ಇದುವರೆಗೆ ಒಟ್ಟು 165 ಗುಂಪುಗಳಿಗೆ ಸುತ್ತುನಿಧಿ ರೂಪದಲ್ಲಿ ಸಹಾಯಧನ ನೀಡಲಾಗಿದೆ. ಉಳಿಕೆ ಗುಂಪುಗಳಿಗೆ ಈ ಆರ್ಥಿಕ ಸಾಲಿನ ಅಂತ್ಯದೊಳಗೆ ಸಹಾಯಧನ ನೀಡಲಾಗುವುದು

ಇ) ಇಲ್ಲ